■ ಶಶಿಕುಮಾರ್ ಸಿ.

# ಫಾಸ್‌ಟ್ಯಾಗ್ ಕೆವೈಸಿ ಗಡುವು ವಿಸ್ತರಣೆ

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (NHAI) 'ಒಂದು ವಾಹನ, ಒಂದು ಫಾಸ್‌ಟ್ಯಾಗ್' ಯೋಜನೆಯಡಿ ಕೆವೈಸಿ ಅಪ್‌ಡೇಟ್ ಮಾಡಲು ನಿಗದಿಪಡಿಸಿದ್ದ ಗಡುವನ್ನು ಮಾರ್ಚ್ 31ರವರೆಗೆ ವಿಸ್ತರಿಸಿದೆ. ಪೇಟಿಎಂ ಫಾಸ್‌ಟ್ಯಾಗ್ ಬಳಕೆದಾರರು ಎದುರಿಸುತ್ತಿರುವ ಸವಾಲುಗಳನ್ನು ಪರಿಗಣಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

'ವನ್ ವೆಹಿಕಲ್, ವನ್ ಫಾಸ್‌ಟ್ಯಾಗ್' ಯೋಜನೆ ಮೂಲಕ 'ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್' (ಆರ್‌ಎಫ್‌ಐಡಿ) ತಂತ್ರಜ್ಞಾನದ ಮೂಲಕ ಟೋಲ್ ಸಂಗ್ರಹ ಮಾಡುವ ಕಾರ್ಯದ ದಕ್ಷತೆಯನ್ನು ಹೆಚ್ಚಿಸಲು ಈ ಯೋಜನೆಯನ್ನು ರೂಪಿಸಲಾಗಿತ್ತು. ಇದರ ಮೂಲಕ ಲಿಂಕ್ ಮಾಡಿದ ಬ್ಯಾಂಕ್ ಖಾತೆಗಳಿಂದ ಟೋಲ್ ಹಣವು ಸ್ವಯಂಚಾಲಿತವಾಗಿ ಕಡಿತಗೊಳ್ಳುತ್ತದೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ತಡೆರಹಿತ ಟೋಲ್ ಪಾವತಿ ಸೇವೆ ಪಡೆಯಲು ಕೆವೈಸಿ ಅಪ್‌ಡೇಟ್ ಮಾಡಲೇಬೇಕೆಂದು ಹೆದ್ದಾರಿ ಪ್ರಾಧಿಕಾರ ಸ್ಪಷ್ಟವಾಗಿ ಹೇಳಿದೆ. ವಾಣಿಜ್ಯ ಅಥವಾ ಖಾಸಗಿ ವಾಹನಗಳೇ ಆಗಿರಲಿ, ಎಲೆಕ್ಟ್ರಾನಿಕ್ ಟೋಲ್ ಸಂಗ್ರಹ ವ್ಯವಸ್ಥೆಯಲ್ಲಿ ಯಾವುದೇ ಅಡೆತಡೆಗಳನ್ನು ತಪ್ಪಿಸಲು ಕೆವೈಸಿ ಅಪ್‌ಡೇಟ್ ಕಡ್ಡಾಯ ಎಂದಿದ್ದ ಪ್ರಾಧಿಕಾರವು ಇದೀಗ ಅದಕ್ಕೆ ನಿಗದಿ ಪಡಿಸಿದ್ದ ಕೊನೆಯ ದಿನಾಂಕವನ್ನು ವಿಸ್ತರಣೆ ಮಾಡಿದೆ. ನಂತರವೂ ಕೆವೈಸಿ ವಿವರಗಳನ್ನು ನವೀಕರಿಸಲು ವಿಫಲವಾದರೆ ಫಾಸ್‌ಟ್ಯಾಗ್ ನಿಷ್ಕ್ರಿಯಗೊಳ್ಳಲಿದೆ.

ಕೆವೈಸಿ ವಿವರಗಳನ್ನು ಅಪ್‌ಡೇಟ್ ಮಾಡಲು ವಾಹನ ಮಾಲೀಕರು ವಾಹನ ನೋಂದಣಿ ಪ್ರಮಾಣಪತ್ರ, ಚಾಲನಾ ಪರವಾನಗಿ ಮತ್ತು ಪ್ಯಾನ್ ಅಥವಾ ಮತದಾರರ ಗುರುತಿನ ಚೀಟಿಯಂತಹ ನಿರ್ದಿಷ್ಟ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಹೆಚ್ಚುವರಿಯಾಗಿ, ಆಧಾರ್ ಕಾರ್ಡ್, ಪಾಸ್‌ಪೋರ್ಟ್ ಮತ್ತು ಪಾಸ್‌ಪೋರ್ಟ್ ಗಾತ್ರದ ಫೋಟೊ ಬೇಕಾಗುತ್ತವೆ. ಬ್ಯಾಂಕ್–ಲಿಂಕ್ಡ್




ಅಥವಾ ವಿತರಣಾ ಪ್ರಾಧಿಕಾರದ ಅಧಿಕೃತ ವೆಬ್‌ಸೈಟ್‌ನಲ್ಲಿ ನೋಂದಾಯಿತ ಮೊಬೈಲ್ ಸಂಖ್ಯೆಯೊಂದಿಗೆ ಲಾಗಿನ್ ಆಗಿ, ಕೆವೈಸಿ ಮಾಡಬೇಕಿದೆ.

ವೆಬ್‌ಸೈಟ್‌ನ 'ಮೈ ಪ್ರೊಫೈಲ್' ವಿಭಾಗಕ್ಕೆ ನ್ಯಾವಿಗೇಟ್ ಮಾಡುವ ಮೂಲಕ, 'ಕೆವೈಸಿ' ಉಪ ವಿಭಾಗವನ್ನು ಕ್ಲಿಕ್ ಮಾಡಿ. ನಂತರ ಕಡ್ಡಾಯ ದಾಖಲೆಗಳನ್ನು ಸಲ್ಲಿಸಿ. ಅಗತ್ಯವಿರುವ ಎಲ್ಲಾ ವಿಭಾಗವನ್ನು ಅಪ್‌ಡೇಟ್ ಮಾಡಿ ಕೆವೈಸಿ ನವೀಕರಣವನ್ನು ಪೂರ್ಣಗೊಳಿಸಿ. ನೀವು ಸಲ್ಲಿಸಿದ ಮಾಹಿತಿಯು ವೆರಿಫಿಕೇಷನ್ ಆಗಿದೆಯೇ ಎಂಬುದನ್ನು ವೆಬ್‌ಸೈಟ್‌ನಲ್ಲೇ ಖಚಿತಪಡಿಸಿಕೊಳ್ಳಿ. ■

## ಜಿಮೇಲ್ ಪೈಪೋಟಿಗೆ ಎಕ್ಸ್‌ಮೇಲ್

ಇ–ಮೇಲ್ ಕ್ಷೇತ್ರದಲ್ಲಿ ದೈತ್ಯವಾಗಿ ಬೆಳೆದು ನಿಂತಿರುವ ಗೂಗಲ್‌ನ ಜಿಮೇಲ್‌ಗೆ ಪೈಪೋಟಿ ನೀಡಲು ಉದ್ಯಮಿ ಎಲಾನ್ ಮಸ್ಕ್ ಎಕ್ಸ್‌ಮೇಲ್ (Xmail) ಆರಂಭಿಸುವುದಾಗಿ ಈಚೆಗೆ ಹೇಳಿದ್ದಾರೆ. ಚಾಟ್‌ಜಿಪಿಟಿಗೆ ಪ್ರತಿಯಾಗಿ ತನ್ನದೇ ಆದ ಎಐ ಆವೃತ್ತಿ ಬಿಡುಗಡೆ ಮಾಡಿದ ನಂತರ ಎಕ್ಸ್‌ಮೇಲ್ ಸೇವೆ ಆರಂಭಿಸುವುದರ ಬಗ್ಗೆ ಅವರು ಖಚಿತಪಡಿಸಿದ್ದಾರೆ.

ತಮ್ಮದೇ ಒಡೆತನದ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ, 'ಎಕ್ಸ್‌ಮೇಲ್ ಎಂದು ಕರೆಯಲ್ಪಡುವ ಉತ್ಪನ್ನವು ಬರುತ್ತಿದೆ' ಎಂದು ಮಸ್ಕ್ ಮಾಹಿತಿ ಹಂಚಿಕೊಂಡಿದ್ದಾರೆ. ಇಷ್ಟರ ಹೊರತಾಗಿ ಎಕ್ಸ್‌ಮೇಲ್ ಆರಂಭದ ಕುರಿತು ಹೆಚ್ಚಿನ ಮಾಹಿತಿ ತಿಳಿದಿಲ್ಲ. ಅಲ್ಲದೆ, ಎಕ್ಸ್‌ನ ಸೆಕ್ಯುರಿಟಿ ಎಂಜಿನಿಯರಿಂಗ್ ತಂಡದ ಹಿರಿಯ ಸದಸ್ಯ ನಾಥನ್ ಮೆಕ್‌ಗ್ರಾಡಿ ಎಕ್ಸ್‌ಮೇಲ್ ಲಾಂಚ್ ದಿನಾಂಕದ ಬಗ್ಗೆ ಈಚೆಗೆ ಎಲಾನ್ ಮಸ್ಕ್ ಅವರಿಗೆ ಎಕ್ಸ್‌ನಲ್ಲಿ ಪ್ರಶ್ನೆ ಕೇಳಿದ್ದರು. ಇದಕ್ಕೆ ಉತ್ತರಿಸಿದ್ದ ಅವರು, 'ಎಕ್ಸ್‌ಮೇಲ್ ಶೀಘ್ರವೇ ಚಾಲ್ತಿಗೆ ಬರಲಿದೆ' ಎಂದಿದ್ದಾರೆ.

ಮೇಲ್ ಸುರಕ್ಷತೆ, ಖಾಸಗೀತನ, ಮೇಲ್‌ಗಳ ವೇಗದ ಡೆಲಿವರಿ ಹಾಗೂ ಸಾಧಾರಣ ವಿನ್ಯಾಸದೊಂದಿಗೆ ಎಕ್ಸ್‌ಮೇಲ್ ಕೂಡಿರಲಿದೆ. ಜಿಮೇಲ್‌ನಲ್ಲಿ ಲಭ್ಯವಿರುವ ಫೀಚರ್‌ಗಳಿಗಿಂತಲೂ ಅತ್ಯಾಧುನಿಕ ಫೀಚರ್‌ಗಳನ್ನು ಇದು ಹೊಂದಿರಲಿದೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.

### ಜಿಮೇಲ್ ಸ್ಥಗಿತ: ಸುಳ್ಳು ವದಂತಿ

ಜಿಮೇಲ್ ಸ್ಥಗಿತಗೊಳ್ಳಲಿದೆ ಎಂಬ ಮಾಹಿತಿಯಿದ್ದ ಪೋಸ್ಟ್, ಈಚೆಗೆ ಎಕ್ಸ್‌ನಲ್ಲಿ ಭಾರೀ ವೈರಲ್ ಆಗಿತ್ತು. ಇದರಲ್ಲಿ ಗೂಗಲ್ ಇ–ಮೇಲ್‌ನ ಸ್ಕ್ರೀನ್‌ಶಾಟ್ ಒಳಗೊಂಡ ಪೋಸ್ಟ್‌ನಲ್ಲಿ 'ಗೂಗಲ್ ಈಸ್ ಸನ್‌ಸೆಟಿಂಗ್ ಜಿಮೇಲ್' ಎಂದಿತ್ತು. ಇದನ್ನು ನಂಬಿದ ಜಿಮೇಲ್ ಬಳಕೆದಾರರು ಆತಂಕಕ್ಕೀಡಾಗಿದ್ದರು. ಈ ಕುರಿತು ಸ್ಪಷ್ಟನೆ ನೀಡಿರುವ ಗೂಗಲ್, 'ಜಿಮೇಲ್ ಸ್ಥಗಿತವಾಗುತ್ತಿಲ್ಲ. ಈ ಹಿಂದೆ ಎಚ್‌ಟಿಎಂಎಲ್ ಆಗಿದ್ದ ಡಿಫಾಲ್ಟ್ ಜಿಮೇಲ್ ಇಂಟರ್‌ಫೇಸ್ ಅನ್ನು ಮತ್ತಷ್ಟು ವರ್ಣರಂಜಿತಗೊಳಿಸಲಾಗುತ್ತದೆ' ಎಂದಿದೆ. ■

## ಗೂಗಲ್: ಎಐ ಉಚಿತ ಕೋರ್ಸ್

ಜಾಗತಿಕವಾಗಿ ಬಳಕೆಯಾಗುತ್ತಿರುವ ಕೃತಕ ಬುದ್ಧಿಮತ್ತೆ (ಆರ್ಟಿಫೀಷಿಯಲ್ ಇಂಟಲಿಜೆನ್ಸ್–ಎಐ) ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಎಲ್ಲೆಡೆ ಹೆಚ್ಚುಗುತ್ತಿದ್ದು, ಈ ಸಂಬಂಧ ಗೂಗಲ್ ಮಹತ್ವದ ನಿರ್ಧಾರವೊಂದನ್ನು ಕೈಗೊಂಡಿದೆ. ಅದುವೇ 'ಎಐ' ಆನ್‌ಲೈನ್ ಕೋರ್ಸ್. ಇದು ಉಚಿತ.

ಇದು ಗೂಗಲ್‌ನ ಎಐ ಸಮಗ್ರ ಆನ್‌ಲೈನ್ ಕೋರ್ಸ್ ಆಗಿದ್ದು, ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಎಲ್ಲಾ ಅಗತ್ಯ ಅಂಶಗಳನ್ನು ಒಳಗೊಂಡಿರಲಿದೆ. ಕೋರ್ಸ್‌ಗಳನ್ನು ಹಲವಾರು ಮಾಡ್ಯೂಲ್‌ಗಳಾಗಿ ವಿಂಗಡಿಸಲಾಗಿದ್ದು, ಪ್ರತಿಯೊಂದೂ ಮಾಡ್ಯೂಲ್‌ಗಳು ನಿರ್ದಿಷ್ಟ ಅಂಶಗಳ ಬಗ್ಗೆಯೇ ಕೇಂದ್ರೀಕರಿಸುತ್ತವೆ. ಆ ಬಗ್ಗೆ ಸಮಗ್ರ ಮಾಹಿತಿಯನ್ನು ತಿಳಿಸಿಕೊಡಲಿವೆ. ಮಾಡ್ಯೂಲ್‌ಗಳು ಮಷಿನ್ ಲರ್ನಿಂಗ್, ನೈಸರ್ಗಿಕ ಭಾಷಾ ಸಂಸ್ಕರಣೆ, ಕಂಪ್ಯೂಟರ್ ವಿಷನ್ ಮತ್ತು ಹೆಚ್ಚಿನದನ್ನು ಒಳಗೊಂಡಿರಲಿವೆ. ಕೋರ್ಸ್‌ಗಳು ಪ್ರಾಯೋಗಿಕ ಪ್ರಾಜೆಕ್ಟ್‌ಗಳನ್ನು ಸಹ ಒಳಗೊಂಡಿರಲಿವೆ. ■